


### ನೆನಪಿನ ಖಜಾನೆಯಿಂದ...

ಅರವತ್ತು ವರ್ಷಗಳ ಹಿಂದಿನ ಮಾತು. ನನ್ನ ಅಮ್ಮ ಪ್ರತಿ ವಾರ 'ಸುಧಾ' ಕಾಯುವ ದಿನಗಳವು. ಅದೇ ದಿನವೇ ಎರಡರಿಂದ ಮೂರು ಗಂಟೆಗಳ ಕಾಲ ಓದುತ್ತಿದ್ದರು. ಅದೇ ನಂಟು ನನ್ನ ಶಿಕಾಗೊ ಜೀವನಶೈಲಿಯಲ್ಲಿಯೂ ಬೆಸೆದಿದೆ. ಕವಿತೆ, ಧಾರಾವಾಹಿ, ಆರೋಗ್ಯ, ಹಲವು ಲೇಖನಗಳು ಸ್ಫೂರ್ತಿ ತುಂಬಿವೆ.

—ಕುರ್ಪಾಡ್ ಎಸ್. ಮೂರ್ತಿ, ಅಮೆರಿಕ

### ಖುಷಿ ಕೊಟ್ಟ ಪತ್ರಿಕೆ

ಹೈಸ್ಕೂಲ್ ದಿನಗಳಲ್ಲಿ ನನಗೆ 'ಸುಧಾ' ಪರಿಚಯವಾಯಿತು. ಆಗಿನಿಂದ ಓದು ಜೀವನಶೈಲಿಯಾಗಿಬಿಟ್ಟಿದೆ. ನನ್ನಲ್ಲಿ ಓದುವ ಹಂಬಲ ಹುಟ್ಟಿಸಿ ಬೆಳೆಸಿದ್ದರಲ್ಲಿ 'ಸುಧಾ' ಪಾಲು ಹೆಚ್ಚು. ಕೆಲ ಕಾಲ ಸೇನೆಯಲ್ಲಿ ಶ್ರೀಲಂಕಾ, ಕಾಶ್ಮೀರದಲ್ಲಿ ಕೆಲಸ ಮಾಡಿದ್ದೆ. ಅಲ್ಲಿ 'ಸುಧಾ' ಸ್ವಲ್ಪ ತಡವಾದರೂ ವಾರ ವಾರ ಬರುತ್ತಿತ್ತು. 1999ರ ಅಕ್ಟೋಬರ್‌ನಲ್ಲಿ ನನ್ನ 'ಪ್ರಾದೇಶಿಕ ಸೇನೆ' ಎಂಬ ಲೇಖನ ಪ್ರಕಟಗೊಂಡಿದ್ದು ತುಂಬಾ ಖುಷಿ ಕೊಟ್ಟಿತ್ತು.

—ಜೆ.ವಿ. ಪ್ರಸಾದ್, ಬೆಂಗಳೂರು

### ನನಗೂ ನನ್ನ ಗೆಳತಿಗೂ...

ನಾನು ತವರು ಮನೆಯಲ್ಲಿದ್ದಾಗ ಪತ್ರಿಕೆ ಓದುವ ಅಭ್ಯಾಸ ಇರಲಿಲ್ಲ. ಗಂಡನ ಮನೆಗೆ ಬಂದಾಗ ಓದಲು ಶುರು ಮಾಡಿದೆ. ನನ್ನ ಗಂಡನ ಮನೆಯವರು 'ಸುಧಾ' ಆರಾಧಕರು. ಅಂದಿನಿಂದ ನಾನೂ 'ಸುಧಾ' ಓದಲು ಆರಂಭಿಸಿದೆ. ಈಗ ನನಗೂ ಅರವತ್ತು, ನನ್ನ ಗೆಳತಿ 'ಸುಧಾ'ಳಿಗೂ ಅರವತ್ತು. 'ನೀವು ಕೇಳಿದಿರಿ?'ಯಲ್ಲಿ ಪ್ರಶ್ನೆ ಕೇಳುವುದು ನನ್ನ ಹವ್ಯಾಸ. ನನ್ನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾಳೆ 'ಸುಧಾ'.

—ಬಿದರಹಳ್ಳಿ ವಿಜಯ
ಹಿರೇಹಡಗಲಿ

### 'ಸೆಲೆಬ್ರಿಟಿ' ಸೂಪರ್!

'ಸುಧಾ' ಓದುವುದೇ ನಮಗೆ ಹೆಮ್ಮೆಯ ವಿಷಯ. ನಾವಲ್ಲದೆ ನಮ್ಮ ಮಕ್ಕಳು ಕೂಡ ತುಂಬಾ ಇಷ್ಟಪಟ್ಟು ಎಳೆಯರ ಅಂಗಳ ಓದುತ್ತಿದ್ದರು. ಪದಬಂಧ ಬಿಡಿಸುತ್ತಿದ್ದರು. ಅದರಲ್ಲಿ ಬರುವ ನಕ್ಕುಬಿಡಿ, ನಗೆಹೊನಲು, ಮಾತೇ ಮುತ್ತು, ಧಾರಾವಾಹಿಗಳು, ಮುಖಪುಟ ಲೇಖನಗಳು, ಕಥೆಗಳನ್ನು ಇಷ್ಟಪಟ್ಟು ಓದುತ್ತೇವೆ. ಸೆಲೆಬ್ರಿಟಿ ಅಂಕಣ ಸೂಪರ್. 'ಸುಧಾ' ಬಂದ ಕೂಡಲೇ ಒಮ್ಮೆ ತಿರುವಿದರೆ ಹಾಕಿದರೆ ಸಮಾಧಾನ.

—ರೇಖಾ ಸೋಮನಾಥ,
ಬೆಂಗಳೂರು

## 'ಸುಧಾ' ಜೊತೆಗಿನ ಓದುಗರ ಒಡನಾಟ

### ನನ್ನ ಸಾಹಿತ್ಯ ಸಂಗಾತಿ

ಪ್ರೌಢಶಾಲಾ ವಿದ್ಯಾರ್ಥಿನಿಯಾಗಿದ್ದಾಗ ಬಂಧುಗಳೊಬ್ಬರ ಮನೆಯಲ್ಲಿ ನನಗೆ 'ಸುಧಾ' ಪತ್ರಿಕೆ ಓದಲು ಸಿಕ್ಕಿತು. ಮುಂದೆ ಕಾಲೇಜಿಗೆ ಬಂದಾಗ, ಮತ್ತೆ ಓದುವ ಅವಕಾಶ ಲಭ್ಯವಾಯಿತು. ಬೆಂಗಳೂರಿಗೆ ಬಂದ ಮೇಲಂತೂ 'ಸುಧಾ' ನನಗೆ ಪ್ರತಿ ವಾರದ ಅತಿಥಿಯಂತಾಯಿತು.

ವಿವಿಧ ವಯೋಮಾನದವರ ಅಭಿರುಚಿ, ಆಸಕ್ತಿಗನುಗುಣವಾಗಿ ಲೇಖನಗಳು 'ಸುಧಾ'ದಲ್ಲಿ ಇದ್ದೇ ಇರುತ್ತವೆ. ಧಾರಾವಾಹಿ, ಕಥೆ, ಲೇಖನಗಳು, ಪ್ರವಾಸ, ಕ್ರೀಡೆ, ಸಿನಿಮಾ, ಆರೋಗ್ಯ, ಸೌಂದರ್ಯ, ಅಡುಗೆ, ಎಳೆಯರ ಅಂಗಳ... ಯಾವುದುಂಟು? ಯಾವುದಿಲ್ಲ?

ನನ್ನ ಪ್ರವಾಸ ಕಥನಗಳು, ಕಥೆಗಳು 'ಸುಧಾ'ದಲ್ಲಿ ಪ್ರಕಟವಾಗಿವೆ. ಯುವ ಅಂಕಣ, ವಂಡರ್ ಪುಟ, ಜಾಣರ ಪೆಟ್ಟಿಗೆ ಮುಂತಾದುವುಗಳಲ್ಲೂ ನನ್ನ ಬರಹಗಳು ಬೆಳಕು ಕಂಡಿವೆ. ಇವೆಲ್ಲ ನನಗೆ ಹೆಮ್ಮೆಯ ವಿಷಯ; ಮಾತ್ರವಲ್ಲ, 'ಸುಧಾ' ನಂಟನ್ನು ಬಿಗಿಗೊಳಿಸಿದ ಸಂಗತಿಗಳು.

ಈಗ 'ಸುಧಾ'ಗೆ 60 ವರ್ಷ. ಪತ್ರಿಕೆ ಕಾಲಕಾಲಕ್ಕೆ ಹೊಸ ವಿನ್ಯಾಸಗಳನ್ನು ತಳೆದಿದ್ದು, ಸುಂದರವಾಗಿ ಮೂಡಿಬರುತ್ತಿದೆ.

—ಸರಸ್ವತಿ ಶಂಕರ್, ಬೆಂಗಳೂರು

### ಮನಸ್ಸಿನಲ್ಲಿ 'ಸುಧಾ' ಬಿಂಬ

'ಸುಧಾ' ಪತ್ರಿಕೆಯನ್ನು ನನಗೆ ಬುದ್ಧಿ ತಿಳಿದಾಗಿನಿಂದ ಓದುತ್ತಾ ಬಂದಿದ್ದೇನೆ. ಚಿಕ್ಕಂದಿನಲ್ಲಿ ಪಕ್ಕದ ಮನೆಗೆ 'ಸುಧಾ' ಬರುವುದನ್ನೇ ಕಾಯುತ್ತಿದ್ದೆವು. ಡಾಬೂ, ಆಜಾದ್, ಶೂಜಾ, ಮಜನೂ ಮುಂತಾದ ಮಕ್ಕಳ ಕಾಮಿಕ್ಸ್ ಉತ್ತಮವಾಗಿ ಬರುತ್ತಿತ್ತು. ಬಹುಶಃ ಕಾದಂಬರಿಗಳಿಗೆ 'ಸುಧಾ' ಕೊಟ್ಟ ಮಹತ್ವ ಬೇರೆ ಯಾವ ಪತ್ರಿಕೆಯೂ ಕೊಟ್ಟಿಲ್ಲ.

ಕೆ.ಟಿ. ಗಟ್ಟಿಯವರ ಸರಣಿ ಕಾದಂಬರಿಗಳು ಓದುಗರನ್ನು ಕಾಯುವಂತೆ ಮಾಡುತ್ತಿದ್ದವು. 'ಶಬ್ದಗಳು' ಧಾರಾವಾಹಿಯಲ್ಲಿನ ಕಿರಣ ಶಂಕರ, 'ಅಬ್ರಾಹ್ಮಣ'ದ ಜಗದೀಶ, 'ಪುನರಪಿ ಜನನಮ್'ನ ರಾಮು ಮಾಸ್ತ್ರು ಬಹುವಾಗಿ ಕಾಡಿದ ಪಾತ್ರಗಳು. ನೈಜ ಪಾತ್ರಗಳಂತೆಯೇ ಚಿತ್ರಿತವಾಗಿದ್ದವು.

ಮನು, ಎಚ್.ಕೆ. ಅನಂತರಾಮು, ಯಂಡಮೂರಿ ವೀರೇಂದ್ರನಾಥ್ ಮುಂತಾದವರು 'ಸುಧಾ'ದಿಂದಲೇ ಕನ್ನಡದಲ್ಲಿ ಪ್ರಸಿದ್ಧಿ ಪಡೆದವರು. 10–15 ವರ್ಷಗಳ ಹಿಂದೆ ರೂಪಿಸುತ್ತಿದ್ದ ಏಪ್ರಿಲ್ ಹಾಸ್ಯ ಸಂಚಿಕೆಗಳು ಅತ್ಯುತ್ತಮವಾಗಿರುತ್ತಿದ್ದವು. ಎಚ್ಚೆಸ್ವೆ ಅವರ 'ವಾರದ ವ್ಯಕ್ತಿ' ಅತ್ಯುತ್ತಮ ಅಂಕಣ. 'ಸುಧಾ' ಬಗ್ಗೆಯೇ ಕಾದಂಬರಿಗಾಗುವಷ್ಟು ಬರೆಯಬಹುದು.

—ಬಿಲ್ಲೇಶ್ವರ ಅಚ್ಚು, ಹುಂಚ

### ಪತ್ರಕರ್ತನಾಗಿ ರೂಪಿಸಿದ ಪತ್ರಿಕೆ

'ಸುಧಾ'ಳಿಗೆ 60 ಎಂಬುದು ಕನ್ನಡದ ಓದುಗರೆಲ್ಲಾ ಸಂಭ್ರಮಿಸಬೇಕಾದ ವಿಚಾರ. 'ಸುಧಾ' ಮೂಲಕವೇ ನಾನು ಪತ್ರಕರ್ತನಾದೆ ಎಂದು ಹೆಮ್ಮೆಯಿಂದ ಹೇಳಬಲ್ಲೆ. ಪತ್ರಿಕೋದ್ಯಮ ಪದವಿ ಪಡೆಯುತ್ತಿದ್ದ ದಿನಗಳಲ್ಲಿ 'ಸುಧಾ'ದಲ್ಲಿ ಲೇಖನ ಪ್ರಕಟಣೆ ಮೂಲಕ ಪತ್ರಿಕೋದ್ಯಮದ ನಿಜವಾದ ಸಂಭ್ರಮ ಕಂಡುಕೊಳ್ಳುತ್ತಿದ್ದೆ. 'ಸುಧಾ'ದಲ್ಲಿ ಲೇಖನ ಪ್ರಕಟವಾಗುವುದು ಹೆಮ್ಮೆ ಮಾತ್ರವಲ್ಲ, ಪ್ರತಿಷ್ಠೆಯೂ ಆಗಿತ್ತು. ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಕೆಡವಿ ವರ್ಷದ ಬಳಿಕ ನಾನು ಅಲ್ಲಿಗೆ ತೆರಳಿ ಅಲ್ಲಿನ ಸ್ಥಿತಿಗತಿ ಬಗ್ಗೆ ರೂಪಿಸಿದ್ದ ಪ್ರತ್ಯಕ್ಷ ವರದಿ 'ಸುಧಾ'ದಲ್ಲಿ ಮುಖಪುಟ ಲೇಖನವಾಗಿ ಪ್ರಕಟಗೊಂಡಿತ್ತು. ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನಲ್ಲಿ ಸಾವನ್ನಪ್ಪಿದ್ದ ಸಾಕಾನೆ ಕೇಶವನ ಕುರಿತಂತೆ ವಿಭಿನ್ನ ನಿರೂಪಣಾ ಶೈಲಿಯಲ್ಲಿ ಬರೆದ ಲೇಖನಕ್ಕೆ 120ಕ್ಕೂ ಹೆಚ್ಚು ಓದುಗರ ಸ್ಪಂದನ ದೊರಕಿತ್ತು. 'ಅತ್ಯಧಿಕ ಸ್ಪಂದನ ದೊರಕಿದ ಲೇಖನ' ಎಂಬ ಸಂಪಾದಕರ ಟಿಪ್ಪಣಿ ಎಂದೆಂದಿಗೂ ಸಂಭ್ರಮಿಸುವಂಥದ್ದು. ಎಂ.ಎ. ಪತ್ರಿಕೋದ್ಯಮದ ಅಂತ್ಯದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾದ ಪ್ರೌಢ ಪ್ರಬಂಧಕ್ಕಾಗಿ ನಾನು ಆಯ್ಕೆ ಮಾಡಿಕೊಂಡ ವಿಷಯವೂ 'ಸುಧಾ ವಾರಪತ್ರಿಕೆಯ ಹುಟ್ಟು ಮತ್ತು ಬೆಳವಣಿಗೆ' ಆಗಿತ್ತು. ಆ ಪ್ರಬಂಧ ಸಲ್ಲಿಕೆ ಬಳಿಕವೇ ಪತ್ರಿಕೋದ್ಯಮ ಪದವೀಧರನಾದೆ. ಹೀಗೆ 'ಸುಧಾ' ನನ್ನ ಮತ್ತು ಕುಟುಂಬದವರ ಪಾಲಿಗೆ ಗೆಳತಿಯಾಗಿ ಉಳಿದುಕೊಂಡಿದ್ದಾಳೆ.

—ಅನಿಲ್ ಹೆಚ್.ಟಿ., ಮಡಿಕೇರಿ